# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 86
2. ಸದಸ್ಯರ ಹೆಸರು : ಶ್ರೀ ಎಂ. ನಾರಾಯಣ ಸ್ವಾಮಿ
3. ಉತ್ತರಿಸಬೇಕಾದ ದಿನಾಂಕ : 09.07.2018
4. ಉತ್ತರಿಸುವ ಸಚಿವರು : ಸಣ್ಣ ನೀರಾವರಿ ಸಚಿವರು.

| ಕ್ರಸಂ | ಪ್ರಶ್ನೆಗಳು: | ಉತ್ತರಗಳು: |
|---|---|---|
| ಅ | ಎಲೆ ಮಲ್ಲಪ್ಪ ಕೆರೆ ನೀರನ್ನು ಏತ ನೀರಾವರಿ ಯೋಜನೆಯ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ದಕ್ಷಿಣ ಪಿನಾಕಿನಿ ನದಿಗೆ ಹರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವತಿಯಿಂದ ಎಲೆಮಲ್ಲಪ್ಪಶೆಟ್ಟಿ ಕೆರೆ ನೀರನ್ನು ಏತ ನೀರಾವರಿ ಯೋಜನೆಯ ಮೂಲಕ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ದಕ್ಷಿಣ ಪಿನಾಕಿನಿ ನದಿಗೆ ನೀರನ್ನು ಹರಿಸುವ ಯಾವುದೇ ಯೋಜನೆ ಇರುವುದಿಲ್ಲ. ಆದರೆ, ಎಲೆಮಲ್ಲಪ್ಪ ಶೆಟ್ಟಿ ಕೆರೆಯಿಂದ ಏತ ನೀರಾವರಿ ಮೂಲಕ ಹೊಸಕೋಟೆ ದೊಡ್ಡಕೆರೆಗೆ ನೀರು ತುಂಬಿಸುವ ಯೋಜನೆ ಪೂರ್ಣಗೊಂಡಿದ್ದು, ಕಾರ್ಯನಿರ್ವಹಿಸುತ್ತಿದೆ. |
| ಆ | ಸದರಿ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿದ ಅನುದಾನ ಎಷ್ಟು? ಸದರಿ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ? | ಎಲೆಮಲ್ಲಪ್ಪ ಶೆಟ್ಟಿ ಕೆರೆಯಿಂದ ಹೊಸಕೋಟೆ ದೊಡ್ಡಕೆರೆಗೆ ನೀರು ತುಂಬಿಸುವ ಯೋಜನೆಗೆ ಇದುವರೆಗೂ ಖರ್ಚಾದ ಮೊತ್ತ ರೂ.293.42 ಲಕ್ಷಗಳು.<br>ಈ ಯೋಜನೆಯು 2008ರಲ್ಲಿ ಪ್ರಾರಂಭವಾಗಿ 2011ರಲ್ಲಿ ಪೂರ್ಣಗೊಂಡಿದ್ದು ಕಾರ್ಯನಿರ್ವಹಿಸುತ್ತಿದೆ. |
| ಇ | ಸದರಿ ಯೋಜನೆಗೆ ಸರ್ಕಾರ ಬಿಡುಗಡೆ ಮಾಡಿದ ಅನುದಾನದಲ್ಲಿ ಖರ್ಚಾದ ಮತ್ತು ಖರ್ಚಾಗದೆ ಉಳಿದಿರುವ ಹಣವೆಷ್ಟು? ಸದರಿ ಯೋಜನೆಯು ಪ್ರಾರಂಭವಾಗಿದ್ದಲ್ಲಿ ಎಲೆ ಮಲ್ಲಪ್ಪ ಕೆರೆ ನೀರು ದಕ್ಷಿಣ ಪಿನಾಕಿನಿ ನದಿಗೆ ತಲುಪಿದೆಯೇ? | ಎಲೆಮಲ್ಲಪ್ಪ ಶೆಟ್ಟಿ ಕೆರೆಯಿಂದ ಹೊಸಕೋಟೆ ದೊಡ್ಡಕೆರೆಗೆ ನೀರು ತುಂಬಿಸುವ ಯೋಜನೆಗೆ ಇದುವರೆಗೂ ಖರ್ಚಾದ ಅನುದಾನ ರೂ.293.42 ಲಕ್ಷಗಳು. ಈ ಯೋಜನೆಯು ಪೂರ್ಣಗೊಂಡಿದ್ದು ಕಾರ್ಯನಿರ್ವಹಿಸುತ್ತಿದೆ. |
| ಈ | ಸದರಿ ಯೋಜನೆಯು ಅನುಷ್ಠಾನಗೊಳ್ಳದೇ ಇದ್ದಲ್ಲಿ ಸರ್ಕಾರಕ್ಕಿರುವ ಅಡೆತಡೆಗಳೇನು? ಕಾಮಗಾರಿ ಪ್ರಾರಂಭಗೊಂಡಿದ್ದು ಪೂರ್ಣಗೊಳ್ಳದಿರಲು ಕಾರಣಗಳು ಏನು? | ಉದ್ಭವಿಸುವುದಿಲ್ಲ. |
| ಉ | ಸದರಿ ಯೋಜನೆಯನ್ನು ಪೂರ್ಣಗೊಳಿಸಲು ಇರುವ ಅಡೆತಡೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು? | ಉದ್ಭವಿಸುವುದಿಲ್ಲ. |

ಕಡತ ಸಂಖ್ಯೆ: ಸನೀಇ 57 ವಿಪವಿ 2018

(ಸಿ.ಎಸ್. ಪುಟ್ಟರಾಜು)
ಸಣ್ಣ ನೀರಾವರಿ ಸಚಿವರು